ಆಹಾ ಸುದ್ದಿ!

★ ಸಸಿತೋಟ

ಅಡಿಯಿಂದ ಮುಡಿಯ ತನಕ ಲಿಕ್ರಾ ಉಡುಪಿನಿಂದ ಮುಚ್ಚಿಕೊಂಡ ಇವರು ಟೋಕಿಯೋದ ಝೆಂಟೈ ಕ್ಲಬ್‌ನ ಸದಸ್ಯರು. ಝೆಂಟೈ ಅಂದರೆ ಅಲ್ಲಿರುವ ಪಂಥ. ಮೈ ಮುಚ್ಚಿಕೊಂಡು ಲೈಂಗಿಕ ಪ್ರವೃತ್ತಿಯನ್ನು ಬಿಟ್ಟು ಶುದ್ಧೀಕರಣ ಮಾಡಿಕೊಳ್ಳುವುದಂತೆ. ಒಂದೆಡೆ ಸಂಪೂರ್ಣ ಬೆತ್ತಲೆಯಾಗಿ ಪಾರಮಾರ್ಥ ಸಾಧಿಸುವ ಕೂಗೆದ್ದರೆ, ಇಲ್ಲಿ ಎಲ್ಲಾ ಮರೆ ಮಾಡಿಕೊಂಡು ಪಾರಮಾರ್ಥ ಸಾಧನೆ.

ಅಮೆರಿಕಾದ ಬಾಯಿಸ್‌ನಲ್ಲಿ ಡಾಸ್ ಬ್ರೆಕ್‌ರೂಂ ಎಂಬ ಹೊಸ ವಹಿವಾಟು ಶುರುವಾಗಿದೆಯಂತೆ. ಒತ್ತಡದಿಂದ ಬಳಲುವ ಮಂದಿ ನಿಗದಿತ ಶುಲ್ಕ ಕೊಟ್ಟು ಗೃಹ ಬಳಕೆ ವಸ್ತುಗಳು, ಪೀಠೋಪಕರಣ, ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಗೋಡೆಗೆ ಎಸೆದು ಸಿಟ್ಟು ತೀರಿಸಿಕೊಳ್ಳಬಹುದಂತೆ. ಇವು ಸುಲಭವಾಗಿ ಮುರಿಯುವಂತೆ ವಿನ್ಯಾಸ ಮಾಡಿದ ವಸ್ತುಗಳಂತೆ. ಹೆಂಡತಿಗೆ ಗಂಡನ ಮೇಲೋ, ಗಂಡನಿಗೆ ಹೆಂಡತಿಯ ಮೇಲೋ ಸಿಟ್ಟು ಬಂದರೆ ಒಡೆಯಲು ಅವರ ಬುರುಡೆ ಮಾತ್ರ ಅಲ್ಲಿ ಸಿಗಲಾರದೇನೋ!

ವಿಯೆಟ್ನಾಮಿನ ಈ ಮುದ್ದು ಪ್ರಾಣಿಗಳ ಕೆಫೆಯಲ್ಲಿ ಕಾಫಿ ಕುಡಿಯುತ್ತ ಮುದ್ದು ಪ್ರಾಣಿಗಳ ಮುದ್ದಿನ ಸವಿಯನ್ನೂ ಅನುಭವಿಸಬಹುದು. ಈ ಮುದ್ದು ಪ್ರಾಣಿಗಳೆಂದರೆ ಉಡ, ಮುಳ್ಳುಹಂದಿ, ವಿಷಕಾರಿ ಕಪ್ಪು ಜೇಡ, ಹಾವುಗಳಂತೆ. ಪ್ರಾಣಿಗಳಿಂದ ಕೆಲವು ಬಾರಿ ಸವಿ ಮುದ್ದಿನ ಜೊತೆ ಹುಚ್ಚು ಮುದ್ದನ್ನೂ ಅನುಭವಿಸಬಹುದು.

ಚೀನಾದ ಯುನ್ನಾನ್ ವನ್ಯ ಜೀವಿ ಪಾರ್ಕ್‌ನಲ್ಲಿ ಪಾಂಡಾದ ಸ್ನೇಹಿತೆಯನ್ನು ಬೇರೆ ಕಡೆ ಕಳಿಸಿದ ಮೇಲೆ ಗಂಡು ಪಾಂಡಾ ಸಿಜಿಯ ಖಿನ್ನತೆಗೆ ಒಳಗಾಯಿತಂತೆ. ಪಾರ್ಕ್‌ನ ಸಿಬ್ಬಂದಿ ತಲೆ ಓಡಿಸಿ ಟೀವಿ ತಂದಿಟ್ಟು ಸ್ನೇಹಿತೆಯ ಚಿತ್ರ ಹಾಕುತ್ತಾರಂತೆ. ಈಗ ಪಾಂಡಾ ಸಿಜಿಯ ಖುಷಿಯಾಗಿದೆ. ಟೀವಿಯನ್ನು ಮೂರ್ಖರ ಪೆಟ್ಟಿಗೆ ಎಂದವರಾರು?

ಮೆಕ್ಸಿಕೋದಲ್ಲಿರುವ ನಾಯಿ ಹೋಟೆಲ್‌ನಲ್ಲಿ ಮಹಿಳೆಯೊಬ್ಬಳು ನಾಯಿಯ ಹುಟ್ಟುಹಬ್ಬ ಏರ್ಪಡಿಸಿದ ಪಾರ್ಟಿಯಿದು. ಅಲ್ಲಿ ನಾಯಿಗಳಿಗೆಂದೇ ಜಿಮ್ ಮತ್ತು ಮಸಾಜ್ ಪಾರ್ಲರ್ ಇದೆಯಂತೆ. ಹುಟ್ಟುಹಬ್ಬಕ್ಕೆ ಆಕೆ ಇತರ ನಾಯಿಗಳ ಜೊತೆ ಸ್ನೇಹಿತರನ್ನೂ ಕರೆದಿದ್ದಳಂತೆ. ನಾಯಿಗಳು 'ಹ್ಯಾಪಿ ಬರ್ತ್‌ಡೇ' ಎಂದು ಹೇಗೆ ಹೇಳಿದವೋ!

ಶೌಚಾಲಯದ ಕೊರತೆ, ಶೌಚಾಲಯವಿದ್ದರೂ ಬಯಲಲ್ಲಿ ಕೂತು ಖುಷಿ ಅನುಭವಿಸುವ ಭಾರತದಲ್ಲಿ ನಿತ್ಯ ಬಯಲಿಗೆ ಬೀಳುವ ಮಲದ ಪ್ರಮಾಣ 65 ದಶಲಕ್ಷ ಕೆಜಿಯಂತೆ. ಇದರ ಬಗ್ಗೆ ಅರಿವು ನೀಡಲು ಯುನಿಸೆಫ್ ಸೃಷ್ಟಿಸಿರುವ 'ಮಿಸ್ಟರ್ ಪೂ' ಚಿತ್ರವಿದು. 'ಪೂ ಪಾರ್ಟಿ'ಯಲ್ಲಿ ಎಂಟ್ರಿ ಕೊಡುವ ಮಿಸ್ಟರ್ ಪೂ ವಿಡಿಯೋ ಚುನಾವಣೆ ಪ್ರಚಾರದ ವಿಡಿಯೋ ಥರವೇ ಜನಪ್ರಿಯವಾಗಬೇಕಿದೆ.